ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ : ಇಡಿ/ಕೆಇಎ/ಆಡಳಿತ/ಸಿ.ಆರ್.19/2021 ದಿನಾಂಕ: 19.11.2022

# ಪ್ರಕಟಣೆ

ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಸಂಬಂಧ ಮೂಲ ದಾಖಲೆಗಳ ಪರಿಶೀಲನಾ ಕಾರ್ಯವನ್ನು ದಿನಾಂಕ 09.11.2022 ರಿಂದ ಕೈಗೊಳ್ಳಲಾಗಿರುತ್ತದೆ. ಮೂಲ ದಾಖಲೆಗಳ ಪರಿಶೀಲನಾ ಸಮಯದಲ್ಲಿ, ಪದವಿ ಹಂತದಲ್ಲಿ ಅಭ್ಯಾಸ ಮಾಡಬೇಕಾಗಿರುವ ವಿಷಯ ಹಾಗೂ ಸ್ನಾತಕೋತ್ತರ ಪದವಿ/ವಿಷಯಗಳಿಗೆ ತತ್ಸಮಾನ ವಿದ್ಯಾರ್ಹತೆಯ ಕುರಿತ ಸರ್ಕಾರಿ ಆದೇಶ/ಅಧಿಸೂಚನೆಗಳಲ್ಲಿನ ವಿಷಯಗಳನ್ನು ಹೊರತು ಪಡಿಸಿ, ಇತರೆ ವಿಷಯಗಳಿಗೆ, **ಸ್ನಾತಕೋತ್ತರ ಪದವಿಯಲ್ಲಿ ಅಭ್ಯಾಸಿಸಿದ ವಿಷಯವನ್ನು ಪದವಿ ಹಂತದಲ್ಲಿ ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡದಿರುವ ಅಭ್ಯರ್ಥಿಗಳ** ಮೂಲ ದಾಖಲೆಗಳ ಪರಿಶೀಲನೆಯನ್ನು ಸರ್ಕಾರದ ನಿರ್ದೇಶನ ಕೋರಿ ಮುಂದೂಡಲಾಗಿತ್ತು.

ಪ್ರಸ್ತುತ ಸರ್ಕಾರದ ಪತ್ರ ಸಂಖ್ಯೆ ಇಡಿ 243 ಡಿಸಿಇ 2022 ದಿನಾಂಕ 19.11.2022 ರನ್ವಯ, ಮೇಲ್ಕಂಡ ಕಾರಣಗಳಿಂದ ಮೂಲ ದಾಖಲೆಗಳ ಪರಿಶೀಲನೆಯನ್ನು ಮುಂದೂಡಲಾಗಿದ್ದ ಅಭ್ಯರ್ಥಿಗಳು ದಿನಾಂಕ 19.11.2022 ರಿಂದ 23.11.2022 ವರೆಗೆ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತೆ ತಿಳಿಸಿದೆ. ಅಲ್ಲದೆ ಈಗಾಗಲೇ ದಿನಾಂಕ 09.11.2022 ರಿಂದ 19.11.2022 ವರೆಗೆ ನಡೆಸಲಾದ ಮೂಲ ದಾಖಲೆಗಳ ಪರಿಶೀಲನಾ ಕಾರ್ಯದಲ್ಲಿ ಗೈರುಹಾಜರಾದ ಅಭ್ಯರ್ಥಿಗಳು ಸಹ ಮೇಲೆ ತಿಳಿಸಿದ ದಿನಾಂಕದೊಳಗೆ ಪರಿಶೀಲನೆಗೆ ಹಾಜರಾಗುವಂತೆ ತಿಳಿಸಿದೆ.

(ಎಸ್.ರಮ್ಯ ಭಾ.ಆ.ಸೇ)
ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru – 560 012.
Phone: 080-2356 4583, 2336 1786, Fax: 080-2346 1576
e-mail : keauthority-ka@nic.in Website : http://kea.kar.nic.in